ಪಿ ಸಿ ಆರ್ ನಂ.40/2019 ಸಿ ಡಬ್ಲ್ಯೂ:1

ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕಃ 06-03-2026

ಮುಂದುವರೆದ ಸ್ವ ಹೇಳಿಕೆಃ

ಆಹಾರ ಇಲಾಖೆಯಲ್ಲಿ ಫಲಾನುಭವಿಗಳಿಗೆ ನೀಡಿರುವಂತಹ ಪಡಿತರ ಅಕ್ಕಿಯನ್ನು ಹಂಚಿಕೆ ಮಾಡಿರುತ್ತೇವೆ. ಆಹಾರ ಇಲಾಖೆಯ ಮೊಬೈಲ್ ಸಂದೇಶದ ಆದೇಶದಂತೆ ಫಲಾನುಭವಿಗಳಿಗೆ ಪಡಿತರ ಅಕ್ಕಿಯನ್ನು ವಿತರಣೆ ಮಾಡಿರುತ್ತೇನೆ. 1ನೇ ಆರೋಪಿತನು ನನಗೆ ಲೇ ಮಿಂಡ್ರಿಗುಟ್ಟಿದವನೇ ಅಂತಾ ಅವಾಚ್ಯವಾಗಿ ಬೈದು ನೀನು ಅಂಗಡಿಯನ್ನು ಎಷ್ಟು ಸ್ವಚ್ಛವಾಗಿಟ್ಟುಕೊಂಡಿದ್ದೀಯಾ ಅಂತಲೂ ಬೈದರು ಮತ್ತು ಅಲ್ಲೇ ಇದ್ದ ಆಹಾರ ಪದಾರ್ಥಗಳನ್ನು ಚೆಲ್ಲಾಡಿ ಆಹಾರ ತೂಕ ಮಾಡುವ ಪಲ್ಡಿಯನ್ನು ತೆಗೆದುಕೊಂಡು ನನಗೆ ಹೊಡೆಯಲು ಬಂದರು. ಅದರಿಂದ ನಾನು ತಪ್ಪಿಸಿಕೊಂಡಿದ್ದರಿಂದ ನನ್ನ ತಲೆಗೆ ಬೀಳಬೇಕಾದ ಏಟು ಕಾಲಿನ ಹೆಬ್ಬೆರಳಿಗೆ ಬಿದ್ದು ರಕ್ತ ಗಾಯವಾಯಿತು. ಲೇ ಸೂಳೇಮಗನೇ ನೀನು ಎಲ್ಲರ ಮೇಲೆ ದೌರ್ಜನ್ಯ ಮಾಡುತ್ತೀಯಾ ಅಂತಾ 1ನೇ ಆರೋಪಿ ನನಗೆ ಬೈದರು. ನಾನು ಆ ರೀತಿ ಯಾವುದೇ ಕೆಲಸ ಮಾಡಿಲ್ಲ ಸರಿಯಾದ ರೀತಿಯಲ್ಲಿ ಫಲಾನುಭವಿಗಳಿಗೆ ಪಡಿತರ ಅಕ್ಕಿಯನ್ನು ಹಂಚಿಕೆ ಮಾಡಿದ್ದೇನೆಂದು ತಿಳಿಸಿರುತ್ತೇನೆ. ನಿನ್ನನ್ನು ಸಾಯಿಸುತ್ತೇನಂತಾ ನನಗೆ ದೂಕಿದನು. ನಾನು ಕೆಳಗೆ ಬಿದ್ದಾಗ ಬೂಟುಕಾಲಿನಿಂದ ನನ್ನ ಎಡಗಾಲಿನ ಹೆಬ್ಬೆರಳನ್ನು ತುಳಿದರು. ನಿನ್ನನ್ನು ಹಾಗೇ ಬಿಡುವುದಿಲ್ಲ ಸೂಳೆಮಗನೇ ಅಂತಾ ನನ್ನ ಎದೆಗೆ ಮತ್ತು ಬೆನ್ನಿಗೆ ಬೂಟಿನಿಂದ ನನಗೆ ಹೊಡೆದರು. ಆಗ ನಾನು ಚೆರಾಡಿದಾಗ ನನ್ನ ಮಗ ಹನುಮೇಶ್ ಬಂದು ನನ್ನ ತಂದೆಗೆ ಹೊಡೆಯಬೇಡಿ ಅಂತಾ ನನ್ನನ್ನು ಬಿಡಿಸಿಕೊಂಡ. ಆಗ 1ನೇ ಆರೋಪಿತನು ನನಗೆ ಬೆರಳು ತೋರಿಸುತ್ತೀಯಾ ಅಂತಾ ನನ್ನ ಮಗ ಹನುಮೇಶ್ ಇವನಿಗೆ ಹೇಳಿದನು. ಆಗ ನಾನು ಮತ್ತು ನನ್ನ ಮಗ ಬಡವರ ಮೇಲೆ ಏಕೆ ಅನ್ಯಾಯ ಮಾಡುತ್ತೀರಿ ನಾವು ಯಾವುದೇ ರೀತಿಯಿಂದ ಆಹಾರ ಹಂಚಿಕೆಯಲ್ಲಿ ತಪ್ಪು ಮಾಡಿಲ್ಲ

ಅಂತಾ ಅವರಿಗೆ ಹೇಳಿರುತ್ತೇವೆ. ಅವರ ಜೊತೆ ಇದ್ದ ತಹಶೀಲ್ದಾರ್ ಆಶಪ್ಪ ಪೂಜಾರ್ 4 ನೇ ಆರೋಪಿ ಮತ್ತು ಅವರ ಜೊತೆಗಿದ್ದವರೆಲ್ಲರೂ ಹಣವನ್ನು ಕೊಡು ಅಂತಾ ನಮಗೆ ಕೇಳಿದರು. ಆಗ ನಾವು ಬಡವರಿದ್ದೇವೆ ಹಣವನ್ನು ಕೊಡಲು ಆಗುವುದಿಲ್ಲ ನಾವು ಆಹಾರ ಧಾನ್ಯವನ್ನು ಸರಿಯಾಗಿ ಹಂಚಿಕೆ ಮಾಡಿರುತ್ತೇವಂತಾ ಹೇಳಿದೆವು. ಆಗ 4 ನೇ ಆರೋಪಿ ತಹಶೀಲ್ದಾರ್ ಇವರು ಸಮಯ ಬರಲಿ ನಿಮಗೆ ಸರಿಯಾಗಿ ನೋಡಿಕೊಳ್ಳುತ್ತೇವಂತಾ ಹೇಳಿದರು. ನಂತರ 1 ನೇ ಆರೋಪಿ ಎ ಸಿ ಮತ್ತು 4 ನೇ ಆರೋಪಿ ತಹಶೀಲ್ದಾರ್ ಇವರು ಸ್ಥಳಕ್ಕೆ ಪೋಲೀಸರನ್ನು ಕರೆಯಿಸಿಕೊಂಡು ಪೋಲೀಸ್ ಜೀಪಿನಲ್ಲಿ ನನ್ನನ್ನು ಮತ್ತು ನನ್ನ ಮಗ ಹನುಮೇಶ್ ಇವನನ್ನು ಹಂಪಸಾಗರ ಪೋಲೀಸ್ ಠಾಣೆಗೆ ಕರೆದುಕೊಂಡು ಹೋದರು. ಅಲ್ಲಿ 2 ನೇ ಆರೋಪಿ ಉಪ ತಹಶೀಲ್ದಾರ್ ಶಿವಶಂಕರ್, ವಿ ಎ 3 ನೇ ಆರೋಪಿ ಕೊಟ್ರೇಶ್, 4 ನೇ ಆರೋಪಿ ತಹಶೀಲ್ದಾರ್, 5 ನೇ ಆರೋಪಿ ಮಲ್ಲಿಕಾರ್ಜುನ್ ಇವರೆಲ್ಲಾ ಗುಂಪುಕಟ್ಟಿಕೊಂಡು ರೌಡಿಗಳಂತೆ ವರ್ತಿಸಿ ನನ್ನ ಬಟ್ಟೆಯನ್ನು ಹರಿದು ನನ್ನನ್ನು ಚಡ್ಡಿಯ ಮೇಲೆ ನಿಲ್ಲಿಸಿ ನನ್ನ ಎದೆಗೆ, ಬೆನ್ನಿಗೆ ಮತ್ತು ಮುಖಕ್ಕೆ ಕೈಯಿಂದ ಜೊರಾಗಿ ಗುದ್ದಿದರು. ಅದರಿಂದ ನನಗೆ ಒಳಪಟ್ಟಾಯಿತು ಮತ್ತು ನನ್ನ ಹಲ್ಲುಗಳು ಸೊಟ್ಟ ಆಯಿತು.

(ಮುಂದುವರೆದ ಸ್ವ ಹೇಳಿಕೆಗೆ ಸಾಕ್ಷಿ ಸಮಯ ಕೋರಿದ್ದು ನೀಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ